# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಮುಖ್ಯ ಆಯುಕ್ತರ ಕಾರ್ಯಾಲಯ

ನಂ.ಮುಆ/ಬೃಬೆಂಮಪಾ/ಪಿಆರ್/184/2022 ದಿನಾಂಕ: 03.09.2022

## ಕಛೇರಿ ಆದೇಶ

ವಿಷಯ: ಪಾಲಿಕೆ ವ್ಯಾಪ್ತಿಯ ಬೃಹತ್ ನೀರುಗಾಲುವೆಗಳ ಹಾಗೂ ಕೆರೆಗಳ ಒತ್ತುವರಿ ತೆರವುಗೊಳಿಸುವ ಕುರಿತು

ಉಲ್ಲೇಖ: ಆಯುಕ್ತರು, ಬೃಬೆಂಮಪಾ ಇವರ ಕಛೇರಿ ಸುತ್ತೋಲೆ ಸಂಖ್ಯೆ: ಆಯುಕ್ತರು/ಬಿಬಿಎಂಪಿ/ಪಿಎಸ್ಆರ್(4)/12257/2017-18 ದಿ. 27.02.2018

----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಮಳೆ ನೀರುಗಾಲುವೆಗಳ ಮೇಲಿನ ಒತ್ತುವರಿಯನ್ನು ತೆರವುಗೊಳಿಸುವ ಕುರಿತು ಈ ಹಿಂದೆ ದಿನಾಂಕ 27.02.2018ರಂದು ಹೊರಡಿಸಲಾಗಿರುವ ಉಲ್ಲೇಖಿತ ಕಛೇರಿ ಸುತ್ತೋಲೆಯನುಸಾರ ಮುಖ್ಯ ಅಭಿಯಂತರರು (ಬೃಹತ್ ನೀರುಗಾಲುವೆ) ಹಾಗೂ ಆಯಾ ವಲಯ ಮಟ್ಟದ ಮುಖ್ಯ ಅಭಿಯಂತರರು / ಕಾರ್ಯಪಾಲಕ ಅಭಿಯಂತರರು / ಸಹಾಯಕ ಕಾರ್ಯಪಾಲಕ ಅಭಿಯಂತರರು ಒಂದು ತಿಂಗಳೊಳಗೆ ಜರೂರು ಕ್ರಮ ಕೈಗೊಳ್ಳುವಂತೆ ಹಾಗೂ ಮುಖ್ಯ ಅಭಿಯಂತರರು (ಬೃಹತ್ ನೀರುಗಾಲುವೆ) ಇವರು ಸದರಿ ಕಾರ್ಯಾಚರಣೆಯನ್ನು ಅನುಪಾಲಿಸುವಂತೆ ಸೂಚಿಸಿದೆ.

ಮುಂದುವರಿದು, ಬೆಂಗಳೂರು ನಗರ ವ್ಯಾಪ್ತಿಯ ಕೆರೆಗಳು ಕಂದಾಯ ಇಲಾಖೆಯ ಸ್ವಾಮಿತ್ವದಲ್ಲಿ ಇದ್ದರೂ ಸಹ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸುಪರ್ದಿಯಲ್ಲಿರುತ್ತದೆ ಹಾಗೂ ಬಿಬಿಎಂಪಿ ವತಿಯಿಂದ ಸದರಿ ಕೆರೆಗಳನ್ನು ನಿರ್ವಹಣೆ ಮಾಡಲಾಗುತ್ತಿರುವುದರಿಂದ ಕೆರೆಗಳ ಒತ್ತುವರಿಯನ್ನು ತೆರವುಗೊಳಿಸುವ ಕ್ರಮ ಬಿಬಿಎಂಪಿ ವತಿಯಿಂದಲೇ ಕೈಗೊಳ್ಳಬೇಕಾಗಿರುತ್ತದೆ. ಈ ದಿಕ್ಕಿನಲ್ಲಿ ಮುಖ್ಯ ಅಭಿಯಂತರರು (ಕೆರೆಗಳು) ಇವರು ಕಂದಾಯ ಇಲಾಖೆಯ ಭೂಮಾಪಕರೊಂದಿಗೆ ಕೆರೆ ಒತ್ತುವರಿಗೆ ಸಂಬಂಧಿಸಿದಂತೆ ಸ್ಥಳ ಗುರುತಿಸಿ, ಪರಿಶೀಲನೆ ನಡೆಸಿ ದೃಢೀಕೃತ ಸರ್ವೆ ನಕ್ಷೆಯನ್ನು ಕಂದಾಯ ಇಲಾಖೆಯಿಂದ ಪಡೆದು ಒತ್ತುವರಿಯಾಗಿದ್ದಲ್ಲಿ ಒತ್ತುವರಿ ಪಟ್ಟಿಯನ್ನು ಮುಖ್ಯ ಅಭಿಯಂತರರು (ಕೆರೆಗಳು) ಇವರು ಸಂಬಂಧಪಟ್ಟ ಆಯಾ ವಲಯ ಮುಖ್ಯ ಅಭಿಯಂತರರಿಗೆ ನೀಡುವುದು. ಕರ್ನಾಟಕ ಕೆರೆ ಸಂರಕ್ಷಣೆ & ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ ಕಲಂ-13ರ ಅಡಿಯಲ್ಲಿ ನೀಡಿದ ದಿನಾಂಕ: 23-05-2016ರ ಅಧಿಸೂಚನೆಯಂತೆ ಪದನಾಮೀಕರಿಸಿದ ಪಾಲಿಕೆಯ ವಲಯ ಮಟ್ಟದ ಕಾರ್ಯಪಾಲಕ ಅಭಿಯಂತರರು ನಿಯಮಾನುಸಾರ ಒತ್ತುವರಿಯನ್ನು ತೆರವುಗೊಳಿಸಲು ಕ್ರಮವಹಿಸುವಂತೆ ಹಾಗೂ ಮುಖ್ಯ ಅಭಿಯಂತರರು (ಕೆರೆಗಳು) ಇವರು ಸದರಿ ತೆರವು ಕಾರ್ಯಾಚರಣೆಯನ್ನು ಅನುಪಾಲಿಸುವಂತೆ ಸೂಚಿಸಿದೆ.

ಮೇಲ್ಕಂಡ ಒತ್ತುವರಿ ಕಾರ್ಯಾಚರಣೆಯಲ್ಲಿ ಲೋಪ ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿ / ನೌಕರರ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದೆಂದು ಆದೇಶಿಸಲಾಗಿದೆ.

(ತುಷಾರ್ ಗಿರಿ ನಾಥ್)
ಮುಖ್ಯ ಆಯುಕ್ತರು
ಬೃಬೆಂಮಪಾ

1. ವಿಶೇಷ ಆಯುಕ್ತರು (ಯೋಜನೆ), ಬೃಬೆಂಮಪಾ, ಬೆಂಗಳೂರು
2. ಪ್ರಧಾನ ಅಭಿಯಂತರರು, ಬೃಬೆಂಮಪಾ, ಬೆಂಗಳೂರು
3. ಎಲ್ಲಾ ವಲಯದ ಜಂಟ ಆಯುಕ್ತರು
4. ಮುಖ್ಯ ಅಭಿಯಂತರರು (ಬೃಹತ್ ನೀರುಗಾಲುವೆ), ಬೃಬೆಂಮಪಾ, ಬೆಂಗಳೂರು
5. ಮುಖ್ಯ ಅಭಿಯಂತರರು (ಕೆರೆಗಳು), ಬೃಬೆಂಮಪಾ, ಬೆಂಗಳೂರು
6. ಎಲ್ಲಾ ವಲಯದ ಮುಖ್ಯ ಅಭಿಯಂತರರು
7. ಎಲ್ಲಾ ವಲಯದ ಕಾರ್ಯಪಾಲಕ ಅಭಿಯಂತರರು
8. ಎಲ್ಲಾ ವಲಯದ ಸಹಾಯಕ ಕಾರ್ಯಪಾಲಕ ಅಭಿಯಂತರರು

ಪ್ರತಿ : ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ

1. ಮಾನ್ಯ ಆಡಳಿತಗಾರರು, ಬೃಬೆಂಮಪಾ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, 3ನೇ ಗೇಟ್, 5ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು-01
3. ಆಯುಕ್ತರು, ಸರ್ವೆ ಸೆಟ್ಲಮೆಂಟ್ & ಲ್ಯಾಂಡ್ ರೆಕಾರ್ಡ, ಕೆ.ಆರ್. ವೃತ್ತ, ಬೆಂಗಳೂರು-01.